ದಿನಾಂಕ : 01.08.2025 ರಂದು ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರ **ಶ್ರೀ** ಜೆ.ಎಂ.ಆರ್.**ವಕೀಲರಿಂದ,**

ನಾನು 2011 ರಿಂದ ದಸ್ತುಬರಹಗಾರರಾಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಲೈಸನ್ಸ್ ಅನ್ನು ಪ್ರತಿ ವರ್ಷ ರಿನಿವಲ್ ಮಾಡಬೇಕು ಎಂದರೆ ಸರಿ. ನವೀಕರಣ ಜಿಲ್ಲಾ ಸಬ್ ರೆಜಿಸ್ಟರ್ ರವರಿಂದ ಮಾಡಿಸಬೇಕು ಎಂದರೆ ಸರಿ. ಈ ದಾಖಲೆಯನ್ನು ನಾನು 2016 ರಂದು ಬರೆದಿರುತ್ತೇನೆ. ದಿನಾಂಕಃ 05.07.2016 ರಂದು ಈ ದಾಖಲೆಯನ್ನು ಬರೆದಿರುತ್ತೇನೆ. 2016ರ ರಿನಿವಲ್ ಲೈಸನ್ಸ್ ನಿಮ್ಮ ಕಡೆ ಇಲ್ಲ ಎಂದರೆ ಸಾಕ್ಷಿಯು ಪ್ರತಿ ವರ್ಷ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. 2016 ರಲ್ಲಿ ಲೈಸನ್ಸ್ ರಿನಿವಲ್ ಮಾಡಿದ ದಾಖಲೆ ನಾನು ನ್ಯಾಯಾಲಯಕ್ಕೆ ಸಲ್ಲಿಸಲು ಆಗುವುದಿಲ್ಲ. 2016 ರಲ್ಲಿ ನನಗೆ ದಾಖಲೆ ಬರೆಯಲು ಲೈಸನ್ಸ್ ಇರಲಿಲ್ಲ ಆದರೂ ನಾನು ದಾಖಲೆ ಬರೆದಿರುತ್ತೇನೆ ಎಂದರೆ ಸರಿಯಲ್ಲ.

2. ಪ್ರಾಮಿಸರಿ ನೋಟ್ ಬರೆಯುವಾಗ ಯಾರ್ಯಾರು ಬಂದಿದ್ದರು ಎಂದರೆ ಸಾಕ್ಷಿಯು ಬರೆಸಿಕೊಟ್ಟವರು ಮತ್ತು ಇಬ್ಬರು ಸಾಕ್ಷಿದಾರರು ಅಷ್ಟೇ ಬಂದಿದ್ದರು ಎಂದು ನುಡಿಯುತ್ತಾರೆ. ದಾಖಲೆ ಬರೆಯುವಾಗ ಸಾಲ ಕೊಡುವವರು ಮತ್ತು ಸಾಲ ತೆಗೆದುಕೊಳ್ಳುವವರು ಇಬ್ಬರು ಹಾಜರು ಇರಬೇಕು ಎಂದರೆ ಸಾಕ್ಷಿಯು ನನ್ನ ಪ್ರಕಾರ ಸಾಲ ತೆಗೆದುಕೊಳ್ಳುವವರು ಒಬ್ಬರು ಇದ್ದರೇ ಸಾಕು ಎಂದು ನುಡಿಯುತ್ತಾರೆ. ಈ ಕಾರಣಕ್ಕೆ ದಾಖಲೆ ಊರ್ಜಿತ ಅಲ್ಲ ಎಂದರೆ ಸರಿಯಲ್ಲ. ಬರೆಯಬೇಕಾದರೆ ಇಬ್ಬರು ಇರಬೇಕು

ಎಂದರೆ ಮಾತ್ರ ದಾಖಲೆ ಊರ್ಜಿತ ಇರುತ್ತದೆ ಎಂದರೆ ಸರಿಯಲ್ಲ . ನನ್ನ ಕಡೆ ಯಾರು ಬಂದಿರಲಿಲ್ಲ ನಾನು ಮತ್ತು ನೂರ್ ಮೊಹಮ್ಮದ್ ಸೇರಿಕೊಂಡು ಪ್ರೋನೋಟ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಎದುರಿಗೆ ಹಣದ ವ್ಯವಹಾರ ಆಗಿಲ್ಲ ಅವರು ಬರೆಸಿಕೊಂಡು ಹೋದರು ಎಂದರೆ ಸರಿ. ಬರೆಯಬೇಕಾದರೆ ಬಡ್ಡಿ ಬಗ್ಗೆ ನಾನು ತಿಳಿಸಿಲ್ಲ ಎಂದರೆ ಸಾಕ್ಷಿಯು ನಾನು ಓದಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದ ವಿಷಯ ನಾನು ಹೇಳಿ ಬರೆಸಿರುತ್ತೇನೆ.

3. ನಾನು ಪಿ.ಯು.ಸಿ ವರೆಗೆ ಓದಿರುತ್ತೇನೆ. ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆ. ನನಗೆ ಆಂಗ್ಲ ಭಾಷೆ ಅರ್ಥ ಕೂಡ ಆಗುತ್ತದೆ. ಪ್ರೋನೋಟ್‌ನಲ್ಲಿ " Defendant delivered pro note to the plaintiff ಎಂದು ನಮೂದು ಇದೆ ಅದಕ್ಕೆ ಇಬ್ಬರು ಅಲ್ಲಿ ಇದ್ದರಾ ಎಂದರೆ ಸಾಕ್ಷಿಯು ಅದು ಕಾನೂನು ಭಾಷೆ ಆಗುತ್ತದೆ ನನಗೆ ತಿಳಿಯವುದಿಲ್ಲ ಬರೆಸಿಕೊಟ್ಟವರು ಮತ್ತು ಇಬ್ಬರು ಸಾಕ್ಷಿದಾರರು ಇದ್ದರು ಎಂದು ನುಡಿಯುತ್ತಾರೆ. ನಾನು ಪ್ರೋನೋಟ್ ಅನ್ನು ಸೃಷ್ಟಿ ಮಾಡಿ ಕೊಟ್ಟಿರುತ್ತೇನೆ ನನಗೆ ಬರೆಯುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಸಾಕ್ಷಿದಾರರು ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ,**

( ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ,

ಸೀನಿಯರ್ ಸಿವಿಲ್ ನ್ಯಾಯಾಧೀಶರು, ಸಿರುಗುಪ್ಪ.